INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -4, July--August, 2024,
PageNo,64-69
Peer -Reviewed, Refereed Journal

# ಚಾರಿತ್ರಿಕ ಹಿನ್ನೆಲೆಯಲ್ಲಿ ದೇವನೂರಿನ ಶ್ರೀ ಗುರುಮಲ್ಲೇಶ್ವರ ಮಠ –ಒಂದು ಅವಲೋಕನ

ರತಿ.ಬಿ..[1]

ನಂಜನಗೂಡು ತಾಲ್ಲೂಕು ಧಾರ್ಮಿಕವಾಗಿ ಶ್ರೀಮಂತ ಪರಂಪರೆಯನ್ನು ಹೊಂದಿದೆ. ಇಲ್ಲಿಯ ಧರ್ಮಶ್ರದ್ಧೆ ಕಾರಣದಿಂದಾಗಿಯೇ ಇಂದು ತಾಲ್ಲೂಕಿನ ಪ್ರತಿಯೊಂದು ಗ್ರಾಮದಲ್ಲಿಯೂ ಅನೇಕ ದೇವಾಲಯಗಳಿವೆ. ಕೆಲವೆಡೆಗಳಲ್ಲಿ ಬಸದಿ, ಮಸೀದಿಗಳು, ಚರ್ಚ್‌ಗಳು ನೆಲೆಯೂರಿವೆ. ಇವುಗಳಲ್ಲದೆ 'ಮಠಮಾನ್ಯಗಳು' ಅಸ್ತಿತ್ವದಲ್ಲಿವೆ. ಇವುಗಳ ಮೂಲಕ ಧಾರ್ಮಿಕ ಸಂದೇಶಗಳ ಪ್ರಸಾರವಲ್ಲದೆ, ಜ್ಞಾನದಾಸೋಹ ಅನ್ನ ದಾಸೋಹಗಳಂತಹ ಪ್ರಮುಖ ಸೇವಾಕಾರ್ಯಗಳು ಜರುಗುತ್ತಿವೆ.

ಪ್ರಾಚೀನ ಕಾಲದಿಂದಲೂ ಶೈವ ಪರಂಪರೆಯಲ್ಲಿ ಮಠಗಳು ತನ್ನದೇ ಮಹತ್ವವನ್ನು ಉಳಿಸಿಕೊಂಡಿವೆ. ಸಮಾಜದಲ್ಲಿನ ಮೌಢ್ಯಗಳು, ಅಪನಂಬಿಕೆಗಳು ಮತ್ತು ಅಸಮಾನತೆಯಂತಹ ವಿರೋಧಾಭಾಸಗಳನ್ನು ನಿವಾರಿಸುವ ಕಾರ್ಯದಲ್ಲಿ ಮಠಗಳು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ. ಮಠಗಳು ಜನರಿಗೆ ನೈತಿಕ ಆದರ್ಶ ಮತ್ತು ಉತ್ತಮ ಆಚಾರ ವಿಚಾರಗಳನ್ನು ಬೋಧಿಸುವ ಧಾರ್ಮಿಕ ಕೇಂದ್ರಗಳಾಗಿವೆ.

ಮಠ ಎಂಬ ಪದವು ಆಂಗ್ಲ ಭಾಷೆಯಲ್ಲಿ 'ಮಾನೆಸ್ಟರಿ' ಎಂಬ ಸಂದಿ ಪದವಾಗಿ ಬಳಕೆಯಾಗುತ್ತಿದೆ. ಮಠ ಎಂಬ ಪದಕ್ಕೆ ಇರುವ ಮೂಲ ಅರ್ಥ ಸಂನ್ಯಾಸಿಗಳು ವಾಸಿಸುವ ಕುಟೀರ. ಇದು ತಪಸ್ಸಿನ ಜ್ಞಾನಾನ್ವೇಷಣೆಯ ಧಾರ್ಮಿಕ ಕೇಂದ್ರ' ಅಮರಸಿಂಹನ ಅಮರಕೋಶವು 'ಮಠಃ ಛತ್ರಾದಿ ನಿಲಯ ಎಂದು ತಿಳಿಸುತ್ತದೆ. ಅಂದರೆ ಸಂನ್ಯಾಸಿಗಳು, ವಿದ್ಯಾರ್ಥಿಗಳು ವಾಸಿಸುವ ಸ್ಥಳ ಎಂಬ ಅರ್ಥವನ್ನು ಇದು ಹೊಂದಿದೆ."ರಾಮಾಯಣ–ಮಹಾಭಾರತದ ಕಾವ್ಯಗಳನ್ನು ಗಮನಿಸಿದಾಗ ಅನೇಕ ಗುರುಕುಲಗಳಿದ್ದು, ಅವು ವಿದ್ಯಾಕೇಂದ್ರಗಳಾಗಿದ್ದು, ಧಾರ್ಮಿಕ ಮತ್ತು ನೈತಿಕ ಶಿಕ್ಷಣವನ್ನು ಕೊಡಲಾಗುತ್ತಿತ್ತು ಎಂದು ತಿಳಿಯುತ್ತದೆ."

[1]. ಸಂಶೋಧಕರು,ಇತಿಹಾಸ ಅಧ್ಯಯನ ವಿಭಾಗ,ಮೈಸೂರು ವಿಶ್ವವಿದ್ಯಾನಿಲಯ,ಮಾನಸ ಗಂಗೋತ್ರಿ,ಮೈಸೂರು

ಜ್ಞಾನಾವೇಷಣೆಯ ಧಾರ್ಮಿಕ ಕೇಂದ್ರವೆನಿಸಿದ್ದ ಇವುಗಳು ನಂತರದಲ್ಲಿ ಆಶ್ರಮ, ಗುರುಮನೆ, ಗುರುಕುಲಗಳಾಗಿ, ಕಾಲ ಕ್ರಮೇಣ ವಿದ್ಯಾಪ್ರಸಾರ, ಜ್ಞಾನ ಪ್ರಸಾರ, ಮತ ಪ್ರಚಾರ ಕೇಂದ್ರಗಳಾಗಿ ಬೆಳೆದು ಬಂದಿರುವುದು ತಿಳಿದುಬರುತ್ತದೆ.

ಪೂರ್ವದ "ಬೌದ್ಧ ವಿಹಾರಗಳು, ಸಂಘಾರಾಮಗಳು, (ಬಸದಿಗಳು, ಜೈನ ವಸತಿಗಳು ಸಹ ಮಠಗಳ ಸ್ವರೂಪವನ್ನು ಹೊಂದಿದ್ದವು. 3ನೆಯ ಶತಮಾನದಲ್ಲಿ ಅಶೋಕ ಚಕ್ರವರ್ತಿಯು ಮಹಿಷಮಂಡಲಕ್ಕೆ ಧರ್ಮ ಪ್ರಚಾರಕರನ್ನು ಕಳುಹಿಸಿದನೆಂದು ಬೌದ್ಧ ಮೂಲಗಳಿಂದ ತಿಳಿದುಬರುತ್ತದೆಯಾದ್ದರಿಂದ ಈ ಕಾಲದಲ್ಲಿ ಅವರ ವಿಹಾರ ಮಠಗಳು ಇದ್ದಿರಬೇಕೆಂದು ಊಹಿಸಬಹುದು."

ಇಂತಹದೇ ಹಿನ್ನೆಲೆಯಲ್ಲಿ ದೇವನೂರಿನಲ್ಲಿ ಸ್ಥಾಪನೆಯಾದ ಗುರುಮಲ್ಲೇಶ್ವರ ಮಠವು ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣಾ ಪ್ರಕ್ರಿಯೆಯಲ್ಲಿ ಕಾರ್ಯ ಪ್ರವೃತ್ತವಾಗಿದೆ. ಈ ಮಠವು ತನ್ನ ಕಾಯಕ ದಾಸೋಹ ಪರಿಕಲ್ಪನೆಯ ಮೂಲಕ ಜನಮಾನಸದಲ್ಲಿ ಅಜರಾಮರವಾಗಿದೆ. ಪ್ರಸ್ತುತ ಲೇಖನದಲ್ಲಿ ಗುರುಮಲ್ಲೇಶ್ವರ ಮಠದ ಸ್ಥಾಪನೆಯ ಹಿನ್ನೆಲೆ, ಉದ್ದೇಶಗಳು ಮತ್ತು ಮಹತ್ವವನ್ನು ವಿಶ್ಲೇಷಿಸಲಾಗುತ್ತದೆ.

ನಂಜನಗೂಡು ತಾಲ್ಲೂಕಿನ ದೊಡ್ಡ ಕವಲಂದೆ ಹೋಬಳಿಯ ವ್ಯಾಪ್ತಿಯಲ್ಲಿರುವ ದೇವನೂರು ಗ್ರಾಮವು ಒಂದು ಪ್ರಸಿದ್ಧ ಶೈವ ಧಾರ್ಮಿಕ ಕೇಂದ್ರವಾಗಿದೆ. ಶ್ರೀ ಗುರುಮಲ್ಲೇಶ್ವರರು ದೇವನೂರು ಗ್ರಾಮವನ್ನು ತಮ್ಮ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಟುವಟಿಕೆ ಕೇಂದ್ರವಾಗಿ ಪರಿವರ್ತಿಸಿದರು. ಗುರುಮಲ್ಲೇಶ್ವರರು 1819ರಲ್ಲಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ನ್ಯಾಮತಿ ಸಮೀಪದ ಸವುಳಂಗ ಎಂಬ ಗ್ರಾಮದ ಶರಣಪ್ಪ ಮತ್ತು ಶರ್ವಾಣಮ್ಮ ದಂಪತಿಗಳ ಮಗನಾಗಿ ಜನಿಸಿದರು. ಇವರ ಜನನದ ನಂತರ ಇಡೀ ಕುಟುಂಬವು ಮೈಸೂರಿಗೆ ವಲಸೆ ಬಂದರು. ಮೈಸೂರಿನಲ್ಲಿ ಶಿಕ್ಷಣ, ಆಧ್ಯಾತ್ಮಿಕ ಪರಿಸರ, ಗುರುವಿನ ಮಾರ್ಗದರ್ಶನ, ಸ್ವಯಂ ಸಾಧನೆ, ಯೋಗ, ಕಾಯಕ ಮತ್ತು ದಾಸೋಹ ಮುಂತಾದ ಅಂಶಗಳು ಗುರುಮಲ್ಲೇಶ್ವರರ ವ್ಯಕ್ತಿತ್ವವನ್ನು ಪರಿಪೂರ್ಣಗೊಳಿಸಲು ಸಹಕಾರಿಯಾದವು. ಬಾಲ್ಯದಿಂದಲೂ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಂಡಿದ್ದ ಗುರುಮಲ್ಲೇಶ್ವರರು ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಯ ಮೂಲಕ ಒಂದು ಆಂದೋಲನವನ್ನೇ ಸೃಷ್ಟಿಸಿದರು. ಅವರು ದಯೆ, ಪ್ರೀತಿ, ಕರುಣೆ, ಮಾನವೀಯತೆ, ಶಾಂತಿ, ಕಾಳಜಿ, ಭ್ರಾತೃತ್ವ, ಸೌಹಾರ್ದತೆ, ತಾತ್ವಿಕ ದರ್ಶನ ಮುಂತಾದ ಮೌಲ್ಯಗಳನ್ನು ಪ್ರತಿಪಾದಿಸಿದರು. ಅವರು ಬಸವಣ್ಣನವರ ಸೈದ್ಧಾಂತಿಕ ವಿಚಾರಗಳಿಂದ ಪ್ರೇರಿತರಾಗಿ ಸಮಾಜ ಶುದ್ಧಿ ಕಾರ್ಯದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ಗುರುಮಲ್ಲೇಶ್ವರರು ಮೈಸೂರಿನ ಚೌಕಿ ಮಠದ ಬೆತ್ತಲೆಗುಂಡೆಸ್ವಾಮಿಗಳ ಶಿಷ್ಯರಾಗಿ ಕಂಥೆ ಭಿಕ್ಷೆ ಕಾಯಕದಲ್ಲಿ ನಿರತರಾಗಿದ್ದರು. ತಮ್ಮ 35ನೇ ವಯಸ್ಸಿನವರೆಗೂ ಈ ಮಠದಲ್ಲೇ ಗುರುಗಳ ಸೇವೆಯಲ್ಲಿ ತೊಡಗಿದ್ದರು. ಈ ಸಮಯದಲ್ಲಿ ಗುರುಮಲ್ಲೇಶ್ವರರ ವ್ಯಕ್ತಿತ್ವ ವಿಕಾಸನದಲ್ಲಿ ಬೆತ್ತಲೆಗುಂಡೆ ಸ್ವಾಮಿಗಳು ಅಗಾಧವಾದ ಪ್ರಭಾವವನ್ನು ಬೀರಿದರು. ತಮ್ಮ ತಾತ್ವಿಕ ಚಿಂತನೆಗಳ ಮೂಲಕ ಬೆತ್ತಲೆಗುಂಡೆ ಸ್ವಾಮಿಗಳು ಗುರುಮಲ್ಲೇಶ್ವರರನ್ನು ಪ್ರಬುದ್ಧರನ್ನಾಗಿಸಿದರು. ಅಲ್ಲದೆ ಅವರನ್ನು ಲೋಕ ಕಲ್ಯಾಣ ಕಾರ್ಯಚಟುವಟಿಕೆಗಳಿಗೆ ಸನ್ನದ್ಧರನ್ನಾಗಿಸಿದರು. ಗುರುಮಲ್ಲೇಶ್ವರರು ದೇಹ, ಮನಸ್ಸು, ಬುದ್ಧಿಯ ಮೇಲೆ ಸ್ವಯಂ ನಿಯಂತ್ರಣವನ್ನು ಸಾಧಿಸಿದರು. ಅವರಲ್ಲಿ ಅಹಂಕಾರ ಮನೋಭಾವನೆಗೆ ಅವಕಾಶವಿರಲಿಲ್ಲ. ಅವರು ಶರಣರ ಆಚಾರ ವಿಚಾರಗಳನ್ನು ಮೈಗೂಡಿಸಿಕೊಂಡು ಬೆಳದರು. ಗುರುಮಲ್ಲೇಶ್ವರರು ಮೈಸೂರಿನ ಚಿಕ್ಕಲಿಂಗಮ್ಮನವರ ಮನೆಯಲ್ಲಿ ಯಾವಾಗಲೂ ಮೊಸರನ್ನ ಪ್ರಸಾದವನ್ನು ಸ್ವೀಕರಿಸುತ್ತಿದ್ದರು. ಇವರು ಭಕ್ತರ ಸಮಸ್ಯೆಗಳನ್ನು ನಿವಾರಿಸಲು ಭಕ್ತಿ ಮಾರ್ಗವನ್ನು ಬೋಧಿಸಿದರು.

ಚಿಕ್ಕಲಿಂಗಮ್ಮನವರು ಗುರುಮಲ್ಲೇಶ್ವರರ ಒಳನೋಟಗಳನ್ನು ಮನಗಂಡಿದ್ದ ಶಿಷ್ಯೆಯಾಗಿದ್ದರು. ಚಿಕ್ಕಲಿಂಗಮ್ಮ ಮತ್ತು ಪಟೇಲ್ ಸುಬ್ಬೇಗೌಡರು ಗುರುಮಲ್ಲೇಶ್ವರರನ್ನು ದೇವನೂರಿಗೆ ಕರೆತರುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದರು. ದೇವನೂರಿನ ಪಟೇಲ್ ಸುಬ್ಬೇಗೌಡರ ಧರ್ಮಪತ್ನಿಯಾದ ಶಂಕರಮ್ಮನವರು ಬ್ರಹ್ಮ ಪಿಶಾಚಿಯ ಕಾಟದಿಂದ ತೊಂದರೆಗೆ ಗುರಿಯಾಗಿದ್ದರು. ನಂತರ ಈ ಸಮಸ್ಯೆಯನ್ನು ಗುರುಮಲ್ಲೇಶ್ವರು ನಿಗ್ರಹಿಸಿದರು. ಈ ಘಟನೆಯ ಬಳಿಕ ದೇವನೂರು ಗುರುಮಲ್ಲೇಶ್ವರರ ಕರ್ಮಭೂಮಿಯಾಗಿ ರೂಪುಗೊಂಡಿತು. ದೇವನೂರಿನಲ್ಲಿ ಗುರುಮಲ್ಲೇಶ್ವರರು ವಾಸಿಸಲು ಒಂದು ಮನೆಯನ್ನು ವ್ಯವಸ್ಥೆ ಮಾಡಲಾಯಿತು. ಇದು ಗುರುಗಳ ಕೃಪಾಶೀರ್ವಾದದಿಂದ ದೇವನೂರಿನಲ್ಲಿ ಗುರುಮಲ್ಲೇಶ್ವರ ಮಠವು ಕಾಯಕ, ದಾಸೋಹ ಮತ್ತು ಶಿಕ್ಷಣದ ತತ್ವದ ಮೂಲಕ ಮಾನವ ಸಮುದಾಯದ ಪ್ರಗತಿಗಾಗಿ ಶ್ರಮಿಸುತ್ತಿದೆ.

ಗುರುಮಲ್ಲೇಶ್ವರರು ಸಮಾಜದ ಕಲ್ಯಾಣಕ್ಕಾಗಿ ಬಸವಣ್ಣನವರ ಚಿಂತನೆ ಮತ್ತು ತತ್ವಗಳನ್ನು ಬಳಸಿದರು. ಮೈಸೂರಿನ ಅರಸರಾದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಗುರುಮಲ್ಲೇಶ್ವರರು ಗುರುಗಳಾಗಿದ್ದರು. ಕಾಯಕ ತತ್ವಕ್ಕೆ ಆದ್ಯತೆ ನೀಡಿದ ಗುರುಮಲ್ಲೇಶ್ವರರು ಕಂಥೆ ಭಿಕ್ಷೆ ಕಾರ್ಯಕ್ಕೆ ಚಾಲನೆಯನ್ನು ನೀಡಿದರು. ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡಿದರು. ಈ ಪ್ರಾಂತ್ಯದಲ್ಲಿ ಭಜನಾ ಸಾಹಿತ್ಯಕ್ಕೆ ವಿಶಿಷ್ಟ ಆಯಾಮವನ್ನು ಒದಗಿಸಿದರು. ಗುರುಮಲ್ಲೇಶ್ವರರು ಜೂನ್ 25, 1899ರಂದು ದೈವಾಧೀನರಾದರು.

ಗುರುಮಲ್ಲೇಶ್ವರರು ಸಮಾಜ ಮತ್ತು ಧಾರ್ಮಿಕ ಸುಧಾರಣೆಗಾಗಿ ಅನೇಕ ತತ್ವಗಳನ್ನು ಬೋಧಿಸಿದ್ದಾರೆ. ಗುರುಮಲ್ಲೇಶ್ವರರು ಅಷ್ಟಾವರಣಗಳಾದ ಗುರು, ಲಿಂಗ, ಜಂಗಮ, ಪಾದೋದಕ,

ಪ್ರಸಾದ, ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರವನ್ನು ಜನರಿಗೆ ರಕ್ಷಣೆ ನೀಡುತ್ತದೆ ಮತ್ತು ಅವರ ಅಭಿವೃದ್ಧಿಗೆ ನೆರವಾಗುತ್ತದೆ ಎಂದು ಉಪದೇಶ ಮಾಡಿದರು. ಅವರು ದೇವರ ಅಸ್ತಿತ್ವ, ಧಾರ್ಮಿಕ ಸಂಘರ್ಷ, ಅಸತ್ಯ ನುಡಿಯುವುದು, ವರ್ಗ ಕಲಹ ಮತ್ತು ಅಹಂಕಾರ ಭಾವನೆಯನ್ನು ನಿವಾರಿಸಲು ಪಂಚಾಚಾರಗಳನ್ನು ಪರಿಪಾಲಿಸಬೇಕೆಂದು ಸೂಚಿಸಿದರು. ಅದರೊಂದಿಗೆ 19ನೇ ಶತಮಾನದಲ್ಲಿ ಪಂಚಾಚಾರಗಳಾದ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರಗಳ ಮಹತ್ವವನ್ನು ಪ್ರಚಾರಪಡಿಸಿದರು.

ಗುರುಮಲ್ಲೇಶ್ವರರು ಕಾಯಕ ತತ್ವದ ಪ್ರತಿಪಾದಕರಾಗಿದ್ದರು. ಈ ಕಾಯಕ ತತ್ವವು ಲೌಖಿಕ ಮತ್ತು ಪಾರಮಾರ್ಥಿಕ ಲಾಭಗಳನ್ನು ಒಳಗೊಂಡಿದೆ. ದೇಶದಲ್ಲಿ ವ್ಯಾಪಿಸಬಹುದಾದ ಹಸಿವು, ಬಡತನ, ಅಸಮಾನತೆ ಮುಂತಾದ ಸಮಸ್ಯೆಗಳಿಗೆ ಕಾಯಕ ತತ್ವವು ಆಂಶಿಕವಾದ ಪರಿಹಾರವನ್ನು ನೀಡುತ್ತದೆ. ಇದು ಉಳ್ಳವರು ಮತ್ತು ಇಲ್ಲದವರ ನಡುವಿನ ಅಸಮಾನತೆಯನ್ನು ಹೋಗಲಾಡಿಸಲು ತಾತ್ಕಾಲಿಕ ಪರಿಹಾರವನ್ನು ನೀಡುತ್ತದೆ.

ಗುರುಮಲ್ಲೇಶ್ವರರು ದಾಸೊಹ ಪರಿಕಲ್ಪನೆಗೆ ಹೆಚ್ಚಿನ ಉತ್ತೇಜನವನ್ನು ನೀಡಿದರು. ಅವರು ಕಂಥೆ ಭಿಕ್ಷೆ ಕಾಯಕದ ಮೂಲಕ ಮಠದ ಆಶ್ರಯವನ್ನು ಪಡೆದ ವಿಕಲಚೇತನರುಮ ಅಶಕ್ತರು, ದೀನ–ದುರ್ಬಲರಿಗೆ ದಾಸೋಹವನ್ನು ಮಾಡುತ್ತಾ ಧರ್ಮ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದರು. ಈ ಕಾರ್ಯ ನಿಮಿತ್ತದಲ್ಲಿ ದೇವನೂರು ಮಠವನ್ನು ಕೇಂದ್ರಸ್ಥಾನವನ್ನಾಗಿಸಿಕೊಂಡು ಅನೇಕ ಪ್ರದೇಶಗಳಲ್ಲಿ ಶಾಖಾ ಮಠಗಳನ್ನು ಸ್ಥಾಪಿಸಲಾಯಿತು. ಇದನ್ನು ಶ್ರೀ ಗುರುಮಲ್ಲೇಶ್ವರರ ಭಿಕ್ಷದ ಅಥವಾ ದಾಸೋಹದ ಮಠಗಳೆಂದು ಕರೆಯಲಾಯಿತು.

ಗುರುಮಲ್ಲೇಶ್ವರರು ಎಲ್ಲಾ ಧರ್ಮದ ಜನರಿಗೂ ಲಿಂಗ ತತ್ವೋಪದೇಶವನ್ನು ಮಾಡಿದರು. ಉದಾಹರಣೆಗೆ ದಳವಾಯಿಗಳು, ಮುಸ್ಲಿಂರು, ಬ್ರಾಹ್ಮಣರು, ವೇಶ್ಯೆಯರು, ದೇವದಾಸಿ ಮತ್ತು ಅನೇಕ ಹಿಂದುಳಿದ ವರ್ಗದ ಜನರಿಗೂ ಧರ್ಮದ ಸಾರವನ್ನು ಬೋಧಿಸಿ ತಮ್ಮ ಶಿಷ್ಯರನ್ನಾಗಿ ಪರಿವರ್ತಿಸಿದರು. ಆದ್ದರಿಂದಲೇ ಇವರನ್ನು ಸಮನ್ವಯಾಚಾರ್ಯರು ಎಂದು ಕರೆಯಲಾಗಿದೆ. ಗುರುಮಲ್ಲೇಶ್ವರರು ಮಹಿಳೆಯರ ಹಕ್ಕು, ಅಸ್ತಿತ್ವ ಮತ್ತು ಕಲ್ಯಾಣಕ್ಕೆ ಹೆಚ್ಚಿನ ಗಮನವನ್ನು ನೀಡಿದರು.

ಒಟ್ಟಾರೆ ಗುರುಮಲ್ಲೇಶ್ವರ ಮಠವು ಸಾಮಾಜಿಕ ಮತ್ತು ಧಾರ್ಮಿಕ ಸಂಕೋಲೆಗಳಿಂದ ಮುಕ್ತವಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ. ಅದು ಒಂದು ಆದರ್ಶ ಧಾರ್ಮಿಕ ಕೇಂದ್ರವಾಗಿ ಗುರುತಿಸಿಕೊಂಡಿದೆ. ಗುರುಮಲ್ಲೇಶ್ವರ ಮಠವು ಬಸವ ತತ್ವವಾದ ಕಾಯಕ ಮತ್ತು ದಾಸೋಹ ಪರಿಕಲ್ಪನೆಯನ್ನು ಪರಿಪಕ್ವವಾಗಿ ಆಧುನಿಕ ಸಮಾಜದಲ್ಲಿ ಅನುಷ್ಠಾನಕ್ಕೆ ತಂದಿದೆ ಎಂದು ಹೇಳಬಹುದಾಗಿದೆ.

## ಪರಾಮರ್ಶನ ಗ್ರಂಥಗಳು

1. ಮಹೇಂದ್ರ ಮೂರ್ತಿ, ಮಹಾದರ್ಶನ (ದೇವನೂರು ಶ್ರೀ ಗುರುಮಲ್ಲೇಶ್ವರರ ಜೀವನ–ಸಾಧನೆ), ಪು. 17–19.
2. ಸದಾಶಿವಮೂರ್ತಿ ಡಿ.ಎಸ್., ದೇವನೂರ ಒಡಲೊಳಗೆ, ಪು. 4–5.
3. ವಿಜಯಣ್ಣ, ಸ್ವಲೀಲ ಮಹಾತ್ಮ (ದೇವನೂರು ಗುರುಮಲ್ಲೇಶ್ವರ ಚರಿತೆ), ಗುರುಬಸವಣ್ಣ ಯೋಗಕಮ್ಮಟ, ತುರಗನೂರು, 2016, ಪು. 87–88.
4. ಮಲೆಯೂರು ಗುರುಸ್ವಾಮಿ, ದಾಸೋಹ ಸಿರಿ, ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ, ದೇವನೂರು, 2019, ಪು. 49–52.
5. ವೀರಭದ್ರಸ್ವಾಮಿ ಕ.ಮ., ಶ್ರೀ ಗುರುಮಲ್ಲೇಶ್ವರ ಜೀವನ ಚರಿತ್ರೆ, ಮೈಸೂರು, 1954, ಪು. 2–10.